**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**

**ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 1115/2023**

ಡಿ.ಡಬ್ಲ್ಯೂ-1

| | | |
|---|---|---|
| ಹೆಸರು | : | ರಾಜೇಂದ್ರಗೌಡ |
| ತಂದೆಯ ಹೆಸರು | : | ಶಿವಪ್ಪಗೌಡ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಚವಿ ಗ್ರಾಮ, ತಾಃ ಸೊರಬ,<br>ಜಿಃ ಶಿವಮೊಗ್ಗ |

**ದಿನಾಂಕಃ 28-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಡಿ.ಟಿ.ಬಿ., ಆರೋಪಿ ಪರ ವಕೀಲರಿಂದಃ**

ಪಿರ್ಯಾದಿದಾರರು ನನಗೆ ಜನವರಿ 2019 ರಿಂದ ಪರಿಚಯ. ನಮ್ಮ ಪಕ್ಕದ ಹಳ್ಳಿ ದೇವಸ್ಥಾನದಲ್ಲಿ ಹೂ ಮಾರಲೆಂದು ಪಿರ್ಯಾದಿದಾರರು ಬಂದಿದ್ದಾಗ ನನಗೆ ಪರಿಚಯ ಆದರು. ಕಚವಿ ಗ್ರಾಮಕ್ಕೆ ಅಡಿಕೆ ವ್ಯಾಪಾರಕ್ಕೆಂದು ಪಿರ್ಯಾದಿದಾರರ ಬಂದಿದ್ದರು. ನನಗೆ 2 ಎಕರೆ 30 ಗುಂಟೆ ಜಮೀನು ಇದೆ. ಸದರಿ ಜಮೀನಿನಲ್ಲಿ ಅಡಿಕೆ ಬೆಳೆಯುತ್ತೇನೆ. ಒಂದು ಲಕ್ಷ ರೂಪಾಯಿಗೆ ಅಡಿಕೆಯನ್ನು ನಾನು ಪಿರ್ಯಾದಿದಾರರಿಗೆ ಕೊಟ್ಟಿದ್ದೆ. ಪಿರ್ಯಾದಿದಾರರು ಅಡಿಕೆ ತೆಗೆದುಕೊಂಡು ಹೋಗುವ ಸಲುವಾಗಿ ಮುಂಗಡ ಹಣವಾಗಿ ನನಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಅಡಿಕೆ ಬೆಳೆ ಬಂದ ನಂತರ ಅಡಿಕೆ ಫಸಲನ್ನು ತೆಗೆದುಕೊಂಡು ಹೋಗುವವರೆಗೆ ಭದ್ರತೆಗಾಗಿ ಚೆಕ್‌ನ್ನು ಕೊಡಬೇಕೆಂದು ಕೇಳಿದ್ದ ಕಾರಣ ನಾನು ಪಿರ್ಯಾದಿದಾರರಿಗೆ ಭದ್ರತೆಗಾಗಿ ಚೆಕ್‌ನ ಮೇಲೆ ಎಷ್ಟು ಹಣ ಎಂದು ಬರೆದು ಸಹಿ ಮಾಡಿ ಒಂದು ಚೆಕ್‌ನ್ನು ಕೊಟ್ಟಿದ್ದೆ, ಅದರ ಜೊತೆಗೆ ಇನ್ನೊಂದು ಖಾಲಿ ಚೆಕ್‌ನ್ನು ತೆಗೆದುಕೊಂಡಿದ್ದರು. ಅಡಿಕೆ ಫಸಲು ಬಂದ ನಂತರ ಪಿರ್ಯಾದಿದಾರರು ಫಸಲನ್ನು

ಡಿಡಬ್ಲ್ಯೂ-1

ತೆಗೆದುಕೊಂಡು ಹೋಗಿದ್ದು, ನಾನು ಕೊಟ್ಟ ಚೆಕ್ನ್ನು ವಾಪಸ್ಸ ಕೇಳಿದಾಗ ಪಿರ್ಯಾದಿದಾರನು ಊರಲ್ಲಿ ಬಿಟ್ಟು ಬಂದಿರುತ್ತೇನೆ ನಂತರ ತಂದು ಕೊಡುತ್ತೇನೆ ಎಂದು ಹೇಳಿದ್ದು, ಆದರೆ ನಂತರ ತಂದು ಕೊಡಲಿಲ್ಲ. ಫೋನ ಮೂಲಕ ಕೇಳಿದಾಗ ತಂದು ಕೊಡುತ್ತೇನೆ ಎಂದು ಹೇಳುತ್ತಿದ್ದರು, ಆದರೆ ತಂದುಕೊಡಲಿಲ್ಲ. ಆ ನಂತರ ನಾನು ಸುಮ್ಮನಾದೆ. ನನಗೆ ನ್ಯಾಯಾಲಯದಿಂದ ನೋಟಿಸ್ ಬಂದ ನಂತರವೇ ಪಿರ್ಯಾದಿದಾರರು ಕೇಸ ಹಾಕಿರುವ ಬಗ್ಗೆ ನನಗೆ ಗೊತ್ತಾಯಿತು.

2. ನನಗೆ ನ್ಯಾಯಾಲಯದಿಂದ ನೋಟಿಸ ಬರುವುದಕ್ಕಿಂತ ಮೊದಲು ಪಿರ್ಯಾದಿದಾರನಿಂದ ಯಾವುದೇ ನೋಟಿಸ ಬಂದಿಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡುವಾಗ ರಾಜೇಂದ್ರಗೌಡ ಎಂದು ಸಹಿ ಮಾಡುತ್ತೇನೆ. ನಾನು ರಾಜೇಂದ್ರ ಎಂದು ಎಲ್ಲೂ ಸಹಿ ಮಾಡಿಲ್ಲ. ನನಗೆ ಯಾವುದೇ ನೋಟಿಸ ಬಂದಿಲ್ಲ. ನಾನು ಅಡಿಕೆ ಫಸಲು ಸಂಬಂಧ ಪಿರ್ಯಾದಿದಾರರಿಗೆ ಒಂದು ಲಕ್ಷ ರೂಪಾಯಿ ಕೊಡುವುದು ಬಾಕಿ ಇತ್ತು ಅದಕ್ಕೆ ಭದ್ರತೆಗಾಗಿ ಚೆಕ್ನ್ನು ಕೊಟ್ಟಿದ್ದೆ. ಆದ್ದರಿಂದ ನನಗೆ ನ್ಯಾಯ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಪಿರ್ಯಾದಿದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುತ್ತಾರೆ ನ್ಯಾಯದಾನದ ದೃಷ್ಠಿಯಿಂದ ಪಾಟೀ ಸವಾಲಿಗಾಗಿ ಮುಂದಿನ ದಿನಾಂಕವನ್ನು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.